3 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದಲ್ಲಿ , ತುಮಕೂರು

**Spl.C. No.270/2019**

ಪ್ರಾಸಾ 4

ಚಾಸಾ 4

| | |
|---|---|
| ಹೆಸರು | ಮಂಜುನಾಥ ನಾಯ್ಕ |
| ತಂದೆಯ ಹೆಸರು | ಪಾಲಾಕ್ಷಯ್ಯ |
| ವಯಸ್ಸು | 36 ವರ್ಷ |
| ಉದ್ಯೋಗ | ಗಾರ್ಮೆಂಟ್ಸ್ ಕೆಲಸ |
| ವಾಸಸ್ಥಳ | ಬೆಂಗಳೂರು |

ಸಾಕ್ಷಿಯನ್ನು ದಿನಾಂಕ 22.07.2025 ರಂದು ಕರೆಸಿ ಪ್ರಮಾಣೀಕರಿಸಲಾಯ್ತು.

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ**

1) ಚಾಸಾ.1 ಮತ್ತು 2 ರವರು ಗೊತ್ತಿಲ್ಲ. ಚಾಸಾ.3 ರವರು ಗೊತ್ತು. ಆರೋಪಿ ಗೊತ್ತಿಲ್ಲ. ನಾನು ಯಾವುದೇ ಘಟನಯನ್ನು ಪ್ರತ್ಯಕ್ಷವಾಗಿ ನೋಡಿರುವುದಿಲ್ಲ ಮತ್ತು ನಾನು ಯಾವುದೇ ಹೇಳಿಕೆಯನ್ನು ಕೊಟ್ಟಿರುವುದಿಲ್ಲ.

(ಈ ಹಂತದಲ್ಲಿ ಈ ಸಾಕ್ಷಿಯು ಈ ಹಿಂದೆ ತನಿಖಾಧಿಕಾರಿಯವರ ಮುಂದೆ ನೀಡಿದ ಹೇಳಿಕೆಗೆ ವಿರೋಧಾತ್ಮಕವಾಗಿ ಸಾಕ್ಷ್ಯ ನುಡಿದಿರುವುದರಿಂದ ಪ್ರತಿಕೂಲ ಪಕ್ಷಕಾರರು ತನ್ನ ಪಾಟೀ ಸವಾಲಿನಲ್ಲಿ ಕೇಳಬಹುದಾದ ಪ್ರಶ್ನೆಗಳನ್ನು ಈ ಸಾಕ್ಷಿಗೆ ಕೇಳಲು ಅನುಮತಿ ನೀಡಬೇಕೆಂದು ಸರ್ಕಾರಿ ಅಭಿಯೋಜಕರು ಭಿನ್ನವಿಸಿರುತ್ತಾರೆ. ಈ ಪ್ರಕರಣದ ಕಾಗದ ಪತ್ರಗಳನ್ನು ಪರಿಶೀಲಿಸಿದಾಗ ಈ ಸಾಕ್ಷಿಯು ತನ್ನ ಹಿಂದಿನ ಹೇಳಿಕೆಗೆ ವಿರೋಧಾತ್ಮಕವಾಗಿ ಸಾಕ್ಷ್ಯ ನುಡಿದಿರುವುದು ಕಂಡು ಬರುತ್ತದೆ. ಆದ್ದರಿಂದ ಪ್ರತಿಕೂಲ ಪಕ್ಷಕಾರನು ತನ್ನ ಪಾಟೀಸವಾಲಿನಲ್ಲಿ ಕೇಳಬಹುದಾದ ಪ್ರಶ್ನೆಗಳನ್ನು ಈ ಸಾಕ್ಷಿಗೆ ಕೇಳಲು ಅಭಿಯೋಜನೆಗೆ ಅನುಮತಿ ನೀಡುವುದು ಸೂಕ್ತ ಮತ್ತು ನ್ಯಾಯೋಚಿತ ಎಂದು ಮನಗಂಡು ಅನುಮತಿ ನೀಡಲಾಯಿತು)

**ಪಾಟೀಸವಾಲು: ಸರ್ಕಾರಿ ಅಭಿಯೋಜಕರವರಿಂದಃ**

2) ದಿಃ02.06.2019 ರಂದು ರಾತ್ರಿ 8 ಗಂಟೆಗೆ ಚಾಸಾ.1 ರವರ ಮನೆಯ ಬಳಿ ಗಲಾಟೆಯಾಗುತ್ತಿರುವ ಶಬ್ದ ಕೇಳಿಸಿಕೊಂಡು ನಾನು ಮತ್ತು ಈಶ್ವರಮೂರ್ತಿ ಇಬ್ಬರೂ ಸ್ಥಳಕ್ಕೆ ಹೋದಾಗ ಆರೋಪಿಯು ಇದ್ದು , ಅವರು ಚಾಸಾ.1 ರವರಿಗೆ ಈ ಬೋಳಿ ಮಗ ನಮ್ಮ ಕಾರಿಗೆ ಡಿಕ್ಕಿ ಹೊಡೆಸಿ ಟ್ರಾಕ್ಟರ್ ನ್ನು ತೆಗೆದುಕೊಂಡು ಬಂದಿದ್ದಾನೆ ಎಂದು ಅವಾಚ್ಯ ಶಬ್ದಗಳಿಂದ ಬೈದು ಟ್ರಾಕ್ಟರ್ ತೆಗೆದುಕೊಂಡು ಹೋದನು ಎಂದು ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಯು ಚಾಸಾ.1 ರವರನ್ನು ಎಳೆದಾಡಿ ನಿನಗೆ ಒಂದು ಗತಿ ಕಾಣಿಸುತ್ತೇನೆ ಎಂದು ಜೀವ ಬೆದರಿಕೆ ಹಾಕಿ ಅಡಿಕೆ ದಬ್ಬೆಯಿಂದ ಚಾಸಾ.1 ರವರ ಎಡಗಾಲಿಗೆ ಹೊಡೆದನು ಎಂದರೆ ಸರಿಯಲ್ಲ. ಆಗ ಚಾಸಾ.2 ರವರು ಅಡಿಕೆ ದಬ್ಬೆಯನ್ನು ಕಿತ್ತುಕೊಂಡಿದ್ದು, ಅಷ್ಟರಲ್ಲಿ ಇತರೆ 3 ಜನರು ಸ್ಥಳಕ್ಕೆ ಬಂದಿದ್ದು, ನಂತರ ಆರೋಪಿಯು ದೊಣ್ಣೆಯನ್ನು ತೆಗೆದುಕೊಂಡು ಚಾಸಾ.1 ರವರ ಸೊಂಟಕ್ಕೆ ಮತ್ತು ಕಾಲಿಗೆ ಹೊಡೆದನು ಎಂದರೆ ಸರಿಯಲ್ಲ. ಆಗ ನಾನು ಮತ್ತು ಚಾಸಾ.2 ಮತ್ತು 3 ರವರು ಚಾಸಾ.1 ರವರನ್ನು ಬಿಡಿಸಿಕೊಂಡೆವು ಎಂದರೆ ಸರಿಯಲ್ಲ. ನಂತರ ಆರೋಪಿಯನ್ನು ವಿಚಾರಿಸಿದಾಗ ಚಾಸಾ.1 ರವರ ಟ್ರಾಕ್ಟರ್ ಗೂ ಮತ್ತು ಆರೋಪಿಯ ಕಾರಿಗೆ ಅಪಘಾತವಾಗಿದ್ದು ಚಾಸಾ.1 ರವರು ಟ್ರಾಕ್ಟರ್ ನ್ನು ಸ್ಥಳದಲ್ಲಿ ನಿಲ್ಲಿಸದೇ ಓಡಿಸಿಕೊಂಡು ಬಂದ ಕಾರಣ ಆರೋಪಿಯು ಹಿಂಬಾಲಿಸಿಕೊಂಡು ಬಂದು ಈ ರೀತಿ ಮಾಡಿರುತ್ತಾನೆ, ಈ ಬಗ್ಗೆ ಅಪಘಾತದ ಪ್ರಕರಣ ಏನೂ ಬೇಡ ಎಂದು ಮಾತನಾಡಿಕೊಂಡು ಕಾರನ್ನು ರಿಪೇರಿ ಮಾಡಿಸಿಕೊಡುವುದಾಗಿ ಹಾಗೂ ಅಲ್ಲಿಯವರೆಗೆ ಟ್ರಾಕ್ಟರ್ ನ್ನು ಆರೋಪಿಯ ಮನೆಯ ಬಳಿ ಬಿಡುವುದಾಗಿ ಮಾತನಾಡಿ ಅದರಂತೆ ಟ್ರಾಕ್ಟರ್ ನ್ನು ಆರೋಪಿಯ ಮನೆಯ ಬಳಿ ಬಿಟ್ಟಿರುತ್ತೇವೆ ಎಂದರೆ ಸರಿಯಲ್ಲ. ಗಲಾಟೆಯಾದ ಸಮಯದಲ್ಲಿ ಸ್ಥಳಕ್ಕೆ ಬಂದ 3 ಜನರು ಯಾರೂ ಗಲಾಟೆ ಮಾಡಲಿಲ್ಲ, ಅವರು ದಾರಿಹೋಕರಾಗಿದ್ದು ಯಾವ ಊರಿನವರು ಎಂದು ನನಗೆ ಗೊತ್ತಿಲ್ಲ, ಆರೋಪಿಯ ಚಾಸಾ.1 ರವರಿಂದ ಹಣ ಕಿತ್ತುಕೊಂಡಿದ್ದನ್ನು ನಾನು ನೋಡಿರುವುದಿಲ್ಲ,

ಆರೋಪಿಯು ಚಾಸಾ.1 ರವರನ್ನು ಅವಾಚ್ಯ ಶಬ್ದಗಳಿಂದ ನಿಂದಸಿ ಹಲ್ಲೆ ಮಾಡಿ ಜಾತಿ ನಿಂದನೆ ಮಾಡಿ ಪ್ರಾಣ ಬೆದರಿಕೆ ಹಾಕಿರುತ್ತಾರೆಂದು ನಿಪಿ.9 ರಂತೆ ಪೊಲೀಸರಿಗೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗೆ ಸಹಾಯ ಮಾಡುವ ಸಲುವಾಗಿ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲುಃ ಆರೋಪಿ ಪರ ವಕೀಲರಿಂದಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸಾ ಸ ಇ ಎ ಒ

3 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ತುಮಕೂರು.

ಸಾಕ್ಷಿಯ ಸಹಿ